# ಮಕ್ಕಳ ಸುರಕ್ಷೆ : ನಿರ್ಲಕ್ಷ್ಯ ಸರಿಯಲ್ಲ

**ಶಾಲಾ ಮಕ್ಕಳ ಸುರಕ್ಷಾ ನೀತಿಗೆ ರಾಜ್ಯ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, ಸಾರ್ವಜನಿಕರ ಅಭಿಪ್ರಾಯಗಳನ್ನೂ ಸಂಗ್ರಹಿಸುವಂತೆ ಹೈಕೋರ್ಟ್ ಸರಕಾರಕ್ಕೆ ಸೂಚಿಸಿತ್ತು. ಆದರೆ ಸರಕಾರ ಈ ವಿಷಯದಲ್ಲಿ ಅತ್ಯಂತ ನಿರ್ಲಕ್ಷ್ಯದ ಮನೋಭಾವ ತಳೆದಿದೆ ಎನ್ನುವುದು ಈಗ ಬೆಳಕಿಗೆ ಬಂದಿದೆ.**

ಶಾಲೆಗಳಲ್ಲಿ ಎಳೆಯ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಹಲವಾರು ಪ್ರಕರಣಗಳು ರಾಜ್ಯದಲ್ಲಿ ಕಳೆದ ಒಂದೆರಡು ವರ್ಷಗಳಿಂದ ಎಲ್ಲರ ನಿದ್ದೆಗೆಡಿಸಿದ್ದವು. ಬಹುತೇಕ ಪ್ರಕರಣಗಳಲ್ಲಿ ಶಿಕ್ಷಕರ ಸಹಿತ ಶಾಲಾ ಸಿಬ್ಬಂದಿಯೇ ಈ ದೌರ್ಜನ್ಯದಲ್ಲಿ ಶಾಮೀಲಾದದ್ದು ಬಯಲಾದಾಗ ಇಡೀ ಸಮಾಜವೇ ದಿಗ್ಭ್ರಮೆಗೆ ಒಳಗಾದದ್ದು ಸುಳ್ಳಲ್ಲ. ಎಚ್ಚೆತ್ತ ಪೋಷಕರು ಇದನ್ನೊಂದು ಸಾಮಾಜಿಕ ಸಮಸ್ಯೆ ಎಂಬಂತೆ ಬಿಂಬಿಸಿ, ಸಂಘಟಿತ ಪ್ರತಿಭಟನೆ ನಡೆಸಿದರು. ಪೋಷಕರಿಂದ ವಿವಿಧ ಶುಲ್ಕಗಳ ಹೆಸರಲ್ಲಿ ಸಾವಿರಾರು ರೂಪಾಯಿಗಳನ್ನು ಸುಲಿದರೂ, ಮಕ್ಕಳ ಸುರಕ್ಷತಾ ಕ್ರಮಗಳ ಬಗ್ಗೆ ಗಮನ ಹರಿಸದ ಖಾಸಗಿ ಶಾಲೆಗಳ ಕಡೆಗೆ ನ್ಯಾಯಾಲಯವೂ ಚಿತ್ತ ಹರಿಸಿತು. ನ್ಯಾಯಾಲಯದ ಚಾಟಿಯೇಟಿಗೆ ಸರಕಾರ ಎಚ್ಚೆತ್ತಿತು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಗಳಿಗೆ ಭೇಟಿ ಕೊಟ್ಟು ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿದರು. ತಪ್ಪಿತಸ್ಥರಿಗೆ ದಂಡ, ಎಚ್ಚರಿಕೆ, ನಿಯಮ ಉಲ್ಲಂಘಿಸಿದ ಶಾಲೆಗಳ ವಿರುದ್ಧ ಕ್ರಮ ಎಲ್ಲವೂ ನಡೆದವು. ಇದೇ ಸಂದರ್ಭದಲ್ಲಿ ರಾಜ್ಯ ಹೈಕೋರ್ಟ್, ‘ಶಾಲಾ ಮಕ್ಕಳ ಸಮಗ್ರ ಸುರಕ್ಷತಾ ನೀತಿ’ಯನ್ನು ಜಾರಿಗೆ ತರುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿತು. ಕ್ರಿಯೆಗೆ ಪ್ರತಿಕ್ರಿಯೆ ಎಂಬಂತೆ ಆಗ ನಡೆದ ಈ ಎಚ್ಚರಿಕೆಯ ಕ್ರಮಗಳು, ಈಗ ಸರಕಾರಕ್ಕೆ ಮರೆತೇ ಹೋಗಿದೆ! ಕಳೆದ ವಾರ ರಾಜ್ಯದ ಹೈಕೋರ್ಟ್ ಈ ವಿಷಯವನ್ನು ಮತ್ತೆ ಸರಕಾರದ ನೆನಪಿಗೆ ತಂದಿದೆ. ಮಕ್ಕಳ ಸಮಗ್ರ ಸುರಕ್ಷತಾ ನೀತಿಯ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವಲ್ಲಿ ನಿರ್ಲಕ್ಷ್ಯ ತೋರಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಆಗ ರೂಪಿಸಿದ್ದ ಮಕ್ಕಳ ಸುರಕ್ಷತಾ ನೀತಿಯ ಬಗ್ಗೆ ಶಾಲೆಗಳ ಆಡಳಿತ ಮಂಡಳಿಗಳಿಗೆ ಕೆಲವು ತಕರಾರುಗಳಿದ್ದವು. ಈ ಕುರಿತ ತಕರಾರು ಅರ್ಜಿಯ ವಿಚಾರಣೆ ಹೈಕೋರ್ಟಿನಲ್ಲಿ ನಡೆದೇ ಇದೆ. ಹಿಂದಿನ ಸಲದ ವಿಚಾರಣೆಯಲ್ಲಿ, ಮಕ್ಕಳ ಸುರಕ್ಷಾ ನೀತಿಗೆ ರಾಜ್ಯ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, ಸಾರ್ವಜನಿಕರ ಅಭಿಪ್ರಾಯಗಳನ್ನೂ ಸಂಗ್ರಹಿಸುವಂತೆ ಹೈಕೋರ್ಟ್ ಸರಕಾರಕ್ಕೆ ಸೂಚಿಸಿತ್ತು. ಆದರೆ ಸರಕಾರ ಈ ವಿಷಯದಲ್ಲಿ ಅತ್ಯಂತ ನಿರ್ಲಕ್ಷ್ಯದ ಮನೋಭಾವ ತಳೆದಿದೆ ಎನ್ನುವುದು ಈಗ ಬೆಳಕಿಗೆ ಬಂದಿದೆ. ಸಚಿವ ಸಂಪುಟ ಈ ನೀತಿಗೆ ಅನುಮೋದನೆ ನೀಡದೆ ನೇರವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಕರಡನ್ನು ಕಳುಹಿಸಿಕೊಟ್ಟಿತ್ತು. ಆ ಇಲಾಖೆ ವೆಬ್‌ಸೈಟ್‌ನಲ್ಲಿ ನೀತಿಯನ್ನು ಪ್ರಕಟಿಸಿ ಕೈಕಟ್ಟಿ ಕುಳಿತಿದೆ. ವೆಬ್‌ಸೈಟ್‌ನಲ್ಲಿ ಪ್ರಕಟಿಸಿದರೆ ಜನಸಾಮಾನ್ಯರ ಗಮನಕ್ಕೆ ಬರುತ್ತದೆ ಎಂದಾಗಲೀ, ಅದಕ್ಕೆ ಸಾರ್ವಜನಿಕರು ಪ್ರತಿಕ್ರಿಯೆ ನೀಡುತ್ತಾರೆ ಎಂದಾಗಲೀ ಇಲಾಖೆ ಭಾವಿಸಿದ್ದರೆ ಅದಕ್ಕಿಂತ ಪೆದ್ದುತನ ಇನ್ನೊಂದಿಲ್ಲ. ಶಾಲಾ ಆಡಳಿತ ಮಂಡಳಿಗಳು ಈ ನೀತಿಗೆ ಸೂಚಿಸಿರುವ ಕೆಲವು ತಿದ್ದುಪಡಿಗಳ ಬಗ್ಗೆ ಪೋಷಕರು ಮತ್ತು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿ ತಮ್ಮ ಅನಿಸಿಕೆಯನ್ನು ದಾಖಲಿಸದಿದ್ದರೆ ನೀತಿ ಸಮರ್ಪಕವಾಗಿ ಜಾರಿಗೆ ಬರಲು ಸಾಧ್ಯವಿಲ್ಲ. ಸಾರ್ವಜನಿಕರ ಅಭಿಪ್ರಾಯಗಳನ್ನು ಆಲಿಸಿ ವರದಿ ಸಲ್ಲಿಸಲು ಹೈಕೋರ್ಟ್ ಈಗ ಇಲಾಖೆಗೆ ಎರಡು ವಾರಗಳ ಗಡುವು ನೀಡಿದೆ.

ಶಾಲಾ ಸಿಬ್ಬಂದಿಯ ಮೇಲೆ ಪೂರ್ಣ ಭರವಸೆಯಿಟ್ಟೇ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುತ್ತಾರೆ. ಶಾಲೆಯ ವಾಹನದಲ್ಲಿ ಅಥವಾ ಶಾಲೆಯ ಆವರಣದಲ್ಲಿ ನಡೆಯುವ ಘಟನೆಗಳಿಗೆ ತಾವು ಹೊಣೆಗಾರರಲ್ಲ ಎಂದು ಶಾಲಾ ಆಡಳಿತ ಹೇಳುವಂತಿಲ್ಲ. ಸುರಕ್ಷಾ ಕ್ರಮಗಳ ಬಗ್ಗೆ ಕಟ್ಟುನಿಟ್ಟಿನ ನಿಯಮಗಳು ಇಲ್ಲದಿದ್ದಲ್ಲಿ, ಕಾನೂನಿನ ಅಂಕೆ ಇಲ್ಲವಾದಲ್ಲಿ, ಬಹುತೇಕ ಶಾಲಾ ಆಡಳಿತ ಮಂಡಳಿಗಳು ಈ ಕುರಿತು ನಿರ್ಲಕ್ಷ್ಯ ತಾಳುತ್ತವೆ ಎನ್ನುವುದು ಹಿಂದಿನ ಅನುಭವಗಳಿಂದ ಸಾಬೀತಾಗಿದೆ. ಇಂತಹ ಸೂಕ್ಷ್ಮ ವಿಷಯದ ಬಗ್ಗೆ ತಕರಾರು ಅರ್ಜಿ ಸಲ್ಲಿಸಿ ಕಾಲಹರಣ ಮಾಡುವುದು ಶಾಲಾ ಆಡಳಿತ ಮಂಡಳಿಗಳಿಗೆ ಒಳ್ಳೆಯ ಹೆಸರು ತರುವುದಿಲ್ಲ. ಇಲಾಖೆಯ ಅಧಿಕಾರಿಗಳು ಇದನ್ನೊಂದು ಸಣ್ಣ ಸಂಗತಿ ಎಂದು ಭಾವಿಸಿರುವುದು ಕೂಡಾ ಎಳ್ಳಷ್ಟೂ ಸರಿಯಲ್ಲ. ಎಲ್ಲ ವಿಷಯಗಳಿಗೂ ಕೋರ್ಟ್‌ನಿಂದ ಉಗಿಸಿಕೊಳ್ಳುವುದು ಸರಕಾರಕ್ಕೆ ಶೋಭೆ ತರುವ ಸಂಗತಿಯೂ ಅಲ್ಲ.

■ ಬಿ.ಎಂ.ಹನೀಫ್



ಈಶ್ವರ್